# ಪರ್ಯಾಯ ಶೈಕ್ಷಣಿಕ ಯೋಜನೆ 2021-2022

**ತರಗತಿ : 6** **ಪ್ರಥಮ ಭಾಷೆ : ಕನ್ನಡ** **ಮಾಹೆ : ನವೆಂಬರ್-2021**

**ಗದ್ಯ ಭಾಗ : ಡಾ.ರಾಜಕುಮಾರ್**

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ನವೆಂಬರ್ 1 ನೇ ವಾರ** | **ಕ್ಷೇತ್ರ : ಓದುವುದು**<br>* ಮುದ್ರಿತ ವಿಷಯಗಳನ್ನು ಓದಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು. | **ಚಟುವಟಿಕೆ 1:**<br>ಗ್ರಂಥಾಲಯದಲ್ಲಿರುವ ಯಾವುದಾದರೊಂದು ಪುಸ್ತಕ ಅಥವಾ ದಿನಪತ್ರಿಕೆಯ ಯಾವುದಾದರೊಂದು ಗದ್ಯಾಂಶವನ್ನು ಆಯ್ಕೆ ಮಾಡಿಕೊಂಡು ಓದಲು ಸೂಚಿಸುವುದು. | ವೀಕ್ಷಣೆ |
| | | | **ಚಟುವಟಿಕೆ 2 :**<br>ಆಯ್ದ ಭಾಗವನ್ನು ಓದಿಕೊಂಡ ನಂತರ ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ಸೂಚಿಸುವುದು. | ಪ್ರಶ್ನೆಗಳು |
| | | ಡಾ. ರಾಜಕುಮಾರ್ ಗದ್ಯಭಾಗದ ಪ್ರವೇಶ. | **ಚಟುವಟಿಕೆ 1:**<br>ಡಾ.ಬಿ.ಆರ್. ಅಂಬೇಡ್ಕರ್, ಸರ್. ಎಂ.ವಿಶ್ವೇಶ್ವರಯ್ಯ, ಡಾ.ಎಸ್ ರಾಧಾಕೃಷ್ಣನ್ ಮುಂತಾದ ಮಹಾನುಭಾವರ ಭಾವಚಿತ್ರಗಳನ್ನು ತೋರಿಸುತ್ತಾ ಗುರುತಿಸಲು ಸೂಚಿಸುವುದು. | ವೀಕ್ಷಣೆ |
| | | | **ಚಟುವಟಿಕೆ 2 :**<br>ಡಾ. ರಾಜಕುಮಾರ್‌ರವರ ಭಾವಚಿತ್ರ ತೋರಿಸುತ್ತ, ಅವರ ಬಗ್ಗೆ ಮಕ್ಕಳಿಗೆ ತಿಳಿದಿರುವ ವಿಷಯ ಹೇಳಿಸುವುದು. | ಅವಲೋಕನ |
| | | ಶಿಕ್ಷಕರ ಓದು | ಸ್ವರಭಾರ ಏರಿಳಿತದೊಂದಿಗೆ ಸ್ಪಷ್ಟವಾಗಿ ಗದ್ಯಭಾಗವನ್ನು ಓದುವುದು. | ಅವಲೋಕನ |
| | | ಮಕ್ಕಳ ಓದು | ಮಕ್ಕಳಿಂದ ಗದ್ಯವನ್ನು ಓದಿಸುತ್ತಾ ಹೊಸ ಪದಗಳನ್ನು ಪರಿಚಯಿಸುವುದು. | ಅವಲೋಕನ |

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | ಹೊಸ ಪದಗಳನ್ನು ಅರಿಯುವರು. | * ಆಡುಂಬೊಲ * ಮಜಲು<br>* ಹೆಗಲೆಣೆ * ಅಗಣಿತ<br>* ಕಂಗೆಡು * ಇಹಲೋಕ<br>ಶಿಕ್ಷಕರ ಸಹಾಯ, ಶಬ್ದಕೋಶದ ಸಹಾಯದಿಂದ ಹೊಸಪದಗಳ ಅರ್ಥ ತಿಳಿದು ಬರೆಯುವುದು. | ವೀಕ್ಷಣೆ |
| | | ಡಾ. ರಾಜಕುಮಾರ್‌ರವರ ಜೀವನ ಚರಿತ್ರೆ ಅರಿಯುವರು. | ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸುತ್ತಾ ಡಾ.ರಾಜಕುಮಾರ್‌ರವರ ಸಾಧನೆಯ ಬಗ್ಗೆ ಸ್ಪಷ್ಟ ಅರಿವು ಮೂಡಿಸುವುದು. | ಸಿರಿ ಕನ್ನಡ–6 ರ ಪು.ಸಂ 33 ರಲ್ಲಿರುವ ಅಭ್ಯಾಸ ಚಟುವಟಿಕೆಯಲ್ಲಿರುವ ಪ್ರಶ್ನೆಗಳ ಬಳಕೆ |
| | **ನವೆಂಬರ್ 2ನೇ ವಾರ** | * ಡಾ. ರಾಜಕುಮಾರ್‌ರವರ ಸಾಧನೆಗಳನ್ನು ಅರಿಯುವರು. | ಬಡತನ, ಕೌಟುಂಬಿಕ ಹಿನ್ನಲೆಯಲ್ಲಿ ಬಂದ ಇವರು ಶ್ರದ್ಧೆ, ಪರಿಶ್ರಮ, ಒಳ್ಳೆಯಗುಣ, ಸ್ವಭಾವ, ನಡತೆಯಿಂದಾಗಿ ಹೆಚ್ಚಿನ ಸಾಧನೆ ಮಾಡಿದ್ದಾರೆ. | ಪ್ರಶ್ನೆಗಳು |
| | | * ಡಾ. ರಾಜಕುಮಾರ್‌ರವರಿಗೆ ಬಂದಿರುವ ಬಿರುದುಗಳನ್ನು ತಿಳಿಯುವರು. | ವರನಟ, ಕನ್ನಡದ ಕಣ್ಮಣಿ, ಮೇರುನಟ, ಗಾನಗಂಧರ್ವ, ನಟಸಾರ್ವಭೌಮ, ಪದ್ಮಭೂಷಣ | |

**ಯೋಜನೆ :** ಡಾ. ರಾಜಕುಮಾರ್‌ರವರ ಭಾವಚಿತ್ರವನ್ನು ಸಂಗ್ರಹಿಸಿ. ಅವರು ನಟಿಸಿರುವ ಕನಿಷ್ಠ 50 ಸಿನೆಮಾಗಳ ಹೆಸರುಗಳನ್ನು ಸಂಗ್ರಹಿಸಿ ಪಟ್ಟಿ ಮಾಡಿ ಬರೆಯಿರಿ.

**ಸೂಚನೆ :**

* ಮೇಲಿನ ಚಟುವಟಿಕೆಗಳ ಜೊತೆಗೆ ತಮ್ಮ ಪರಿಸರಕ್ಕೆ, ಅನುಕೂಲಕ್ಕೆ ತಕ್ಕಂತಹ ಉತ್ತಮ ಚಟುವಟಿಕೆಗಳನ್ನು ಬಳಸಿಕೊಳ್ಳುವುದು.
* ಇ–ಸಂವೇದ ತರಗತಿ ಬಳಕೆ.

**ತರಗತಿ : 6** **ಪ್ರಥಮ ಭಾಷೆ : ಕನ್ನಡ** **ಮಾಹೆ : ನವೆಂಬರ್**

**ಪದ್ಯ ಭಾಗ : ಮಗು ಮತ್ತು ಹಣ್ಣುಗಳು**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ನವೆಂಬರ್ 3 ನೇ ವಾರ** | **ಕ್ಷೇತ್ರ : ಮಾತನಾಡುವುದು**<br><br>* ಇತರರೊಡನೆ ಮಾತನಾಡುವಾಗ ಗೌರವಸೂಚಕ ಪದಗಳನ್ನು ಬಳಸುವುದು. | **ಚಟುವಟಿಕೆ 1:**<br>ತರಗತಿಗೆ ಶಿಕ್ಷಕರು ಪ್ರವೇಶಿಸಿದ ತಕ್ಷಣ ಮಕ್ಕಳೊಂದಿಗೆ ನಡೆಸುವ ಸಂಭಾಷಣೆಯನ್ನು ಮತ್ತೊಮ್ಮೆ ನೆನಪಿಗೆ ತರುವುದು.<br>ಶಿಕ್ಷಕಿ : ಮಕ್ಕಳೇ, ಶುಭೋದಯಗಳು.<br>ಮಕ್ಕಳು : ಧನ್ಯವಾದಗಳು, ಶುಭೋದಯಗಳು.<br>**ಚಟುವಟಿಕೆ 2:**<br>ತಂದೆಯವರು ಹಬ್ಬ ಹರಿದಿನಗಳಲ್ಲಿ ಮಕ್ಕಳಿಗೆ ಹೊಸ ಬಟ್ಟೆ ತಂದುಕೊಟ್ಟಾಗ ಮಕ್ಕಳು ಅಪ್ಪನಿಗೆ ಗೌರವ ಸೂಚಿಸುವ ಸಂದರ್ಭ.<br>**ಚಟುವಟಿಕೆ 3:**<br>ಮನೆಗೆ ನೆಂಟರ ಆಗಮನವಾದಾಗ ಸಂತೋಷಗೊಂಡ ಪೋಷಕರು ಅವರನ್ನು ಆತ್ಮೀಯವಾಗಿ ಸ್ವಾಗತಿಸುವ ಸಂದರ್ಭ.<br>**ಚಟುವಟಿಕೆ 4:**<br>ಕುಟುಂಬದಲ್ಲಿ ವಯಸ್ಸಾದ ಅಜ್ಜಿ-ತಾತ ಅವರೊಟ್ಟಿಗೆ ಮೊಮ್ಮಕ್ಕಳ ಪ್ರೀತಿಯ ಸಂಭಾಷಣೆ.<br><br>ಸ್ವರಭಾರ ಏರಿಳಿತದೊಂದಿಗೆ ಸ್ಪಷ್ಟವಾಗಿ ಗದ್ಯಭಾಗವನ್ನು ಓದುವುದು.<br><br>ಮಕ್ಕಳಿಂದ ಗದ್ಯವನ್ನು ಓದಿಸುತ್ತಾ ಹೊಸ ಪದಗಳನ್ನು ಪರಿಚಯಿಸುವುದು. | ಪ್ರಶ್ನೆಗಳು<br><br>ವೀಕ್ಷಣೆ<br><br>ಅವಲೋಕನ |

| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಕವಿ ಕೃತಿ ಪರಿಚಯ ಮಾಡಿಕೊಳ್ಳುವರು.<br><br>**ಪದ್ಯಭಾಗ:**<br>* ಶಿಕ್ಷಕರ ಮಾದರಿ ವಾಚನ<br>* ಮಕ್ಕಳ ವಾಚನ<br><br>* ಹೊಸ ಪದಗಳನ್ನು ಅರಿಯುವರು. | **ಚಟುವಟಿಕೆ 1:**<br>ಕವಿ ಶ್ರೀ ಎಚ್ ಎಸ್ ಶಿವಪ್ರಕಾಶ್‌ರವರ ಜನನ, ಸ್ಥಳ, ಸೇವೆ, ಕೃತಿಗಳ ರಚನೆ, ಪ್ರಶಸ್ತಿ ಪುರಸ್ಕಾರಗಳ ಬಗ್ಗೆ ಶಿಕ್ಷಕರು ತಿಳಿಸಿಕೊಡುವುದು.<br><br>'ಮಗು ಮತ್ತು ಹಣ್ಣುಗಳು' ಈ ಪದ್ಯವನ್ನು ರಾಗಬದ್ಧವಾಗಿ ಶಿಕ್ಷಕರು ಮತ್ತು ಮಕ್ಕಳು ಹಾಡುವರು.<br>ಶಿಕ್ಷಕರು ಮಕ್ಕಳ ವಾಚನವನ್ನು ಆಲಿಸುವ ಮೂಲಕ ತಪ್ಪುಗಳನ್ನು ತಿದ್ದುವುದು.<br><br>* ಗಿರವಿಯಂಗಡಿ * ಗುಜರಿ * ಕಮರು * ಖನಿ * ದಕ್ಕು<br>ಈ ಪದಗಳ ಅರ್ಥವನ್ನು ಶಬ್ದಕೋಶದಲ್ಲಿ ಹುಡುಕಿ ಬರೆಯಲು ಸೂಚಿಸುವುದು. | ಮೌಖಿಕ ಪ್ರಶ್ನೆಗಳು<br><br>ವೀಕ್ಷಣೆ<br><br>ಅವಲೋಕನ |

| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ನವೆಂಬರ್ 4ನೇ ವಾರ** | * ಪದ್ಯದ ಭಾವಾರ್ಥವನ್ನು ಅರಿಯುವರು. | * **ಗುಂಪು ಚಟುವಟಿಕೆ:**<br>**'**ಮಗು ಮತ್ತು ಹಣ್ಣುಗಳು' ಪದ್ಯದಲ್ಲಿ ಕವಿಯು ತಿಳಿಸಿರುವ ಸಾರಾಂಶವನ್ನು ವಿದ್ಯಾರ್ಥಿಗಳು ಸಂಗ್ರಹಿಸಿ ಬರೆಯುವರು. | ಅವಲೋಕನ |
| | | | * ಸಂಗ್ರಹಿಸಿದ ಭಾವಾರ್ಥವನ್ನು ಗುಂಪಿನಲ್ಲಿ ಓದುವರು ಮತ್ತು ಕ್ರೋಢೀಕರಿಸುವರು. | ಅವಲೋಕನ |
| | | * ಪದ್ಯಭಾಗದಲ್ಲಿರುವ ಸಂಧಿಪದಗಳನ್ನು ಗುರುತಿಸಿ ಬರೆಯುವರು. | ಹಣ್ಣಿನಂಗಡಿ ಮುಂದೆ ಕಣ್ಣರಳಿಸುವ ಮಗು<br>ಇಲ್ಲಿ ಈ ತಿರುವಲ್ಲಿ ಥಟ್ಟನವತರಿಸಿದ ಕಪ್ಪುಲಾರಿಯ ಹಾಗೆ<br>ಗಾಳಿ ಕೀಟಲೆ ಉಗುರೊ<br>ತುಂಟರೆಸೆಯುವ ಕಲ್ಲೋ ॥ ॥ | |
| | | * ಸಂಧಿಪದಗಳು | ಹಣ್ಣಿನಂಗಡಿ = ಹಣ್ಣಿನ + ಅಂಗಡಿ<br>ಕಣ್ಣರಳಿಸುವ = ಕಣ್ಣು + ಅರಳಿಸುವ<br>ತಿರುವಲ್ಲಿ = ತಿರುವು + ಅಲ್ಲಿ<br>ಥಟ್ಟನವತರಿಸಿದ = ಥಟ್ಟನೆ + ಅವತರಿಸಿದ<br>ತುಂಟರೆಸೆಯುವ = ತುಂಟರು + ಎಸೆಯುವ<br>ಮೇಲಿನ ಉದಾಹರಣೆಯಂತೆ ಪದ್ಯದ ಮುಂದಿನ ಭಾಗದಲ್ಲಿ ಇರಬಹುದಾದ ಸಂಧಿಪದಗಳನ್ನು ಮಕ್ಕಳಿಂದಲೇ ಗುಂಪುಚಟುವಟಿಕೆ ನಿರ್ವಹಿಸುವ ಮೂಲಕ ಬರೆಯಲು ಸೂಚಿಸುವುದು. | ಅವಲೋಕನ |

| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಲೇಖನ ಚಿಹ್ನೆಗಳನ್ನು ತಿಳಿಯುವರು.<br><br>ಲೇಖನ ಚಿಹ್ನೆಗಳನ್ನು ಬಳಸಿರುವ ಉದಾಹರಣೆಗಳನ್ನು ಅರಿಯುವರು. | ಹಿಂದಿನ ತರಗತಿಯಲ್ಲಿ ಕಲಿತ ಲೇಖನ ಚಿಹ್ನೆಗಳ ಜೊತೆಗೆ ಇನ್ನೂ ನಾಲ್ಕು ಲೇಖನ ಚಿಹ್ನೆಗಳನ್ನು ಪರಿಚಯ ಮಾಡಿಕೊಡುವುದು.<br>ವಿವರಣಾತ್ಮಕ ಚಿಹ್ನೆ – : :–<br>ಆವರಣ ಚಿಹ್ನೆ – ( )<br>ವಾಕ್ಯವೇಷ್ಟನ ಚಿಹ್ನೆ – ‘ ’<br>ಉದ್ಧರಣ ಚಿಹ್ನೆ – “ ”<br><br>ಟಿಪ್ಪಣಿ ಬರೆಯಿರಿ:<br>ಅಮ್ಮ :<br>ಶಾಲೆ :<br>ಕೆಳಗಿನವುಗಳನ್ನು ವಿವರಿಸಿ:<br>ನುಡಿಗಟ್ಟುಗಳು :–<br>ಗಾದೆಗಳು :–<br>ವಿವರಣಾತ್ಮಕ ಚಿಹ್ನೆ ಬಳಸುವ ಸಂದರ್ಭವನ್ನು ವಿವರಿಸುವುದು.<br>ನಾನು ನನ್ನ ಅಮ್ಮ (ತಾಯಿ) ನನ್ನು ತುಂಬಾ ಪ್ರೀತಿಸುತ್ತೇನೆ ಮತ್ತು ಗೌರವಿಸುತ್ತೇನೆ.<br><br>‘ಬೇಸಿಗೆ’ ಪದ್ಯವನ್ನು ‘ಸುಬ್ಬಾಬಟ್ಟರ ಮಗಳೇ’ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.<br><br>ಅತಿಮುಖ್ಯವಾದ ಮತ್ತು ವಿಶಿಷ್ಟಪದ ಬರೆದಾಗ ಅದರ ಪ್ರಾಮುಖ್ಯತೆ ಎತ್ತಿ ತೋರಿಸಲು ವಾಕ್ಯವೇಷ್ಟನ ಚಿಹ್ನೆ ಬಳಸುತ್ತೇವೆ. | **ಪ್ರಶ್ನೆಗಳು:**<br>ಕೆಳಗಿನ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆ ಬಳಸಿ ಬರೆಯಿರಿ.<br>* ದ.ರಾ ಬೇಂದ್ರೆಯವರ ಕಾವ್ಯನಾಮ **ಅಂಬಿಕಾತನಯದತ್ತ**<br>* ಶ್ರೀ ಎಚ್.ಎಸ್. ಶಿವಪ್ರಕಾಶ್ ರವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ** ಪ್ರಶಸ್ತಿ ನೀಡಿ ಗೌರವಿಸಲಾಯಿತು.<br>* ರಜೆಯಲ್ಲಿ ಮಗ್ಗಿ ಕಲಿಯಿರಿ ಎಂದು ಶಿಕ್ಷಕಿಯು ಎಲ್ಲಾ ಮಕ್ಕಳಿಗೂ ಹೇಳಿದರು.<br>* ನಾವು ಧರೆ ಭೂಮಿಗೆ ಮಳೆ ಬರಲೆಂದು ಪ್ರಾರ್ಥಿಸಿದೆವು. |

| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | ಲೇಖನ ಚಿಹ್ನೆಗಳ ಬಳಕೆ | "ನೀವೆಲ್ಲರೂ ಒಟ್ಟಿಗೇ ಹಾಡನ್ನು ಹಾಡಿ" ಎಂದು ಶಿಕ್ಷಕರು ಮಕ್ಕಳಿಗೆ ಹೇಳಿದರು.<br>"ನೀನೇಕೆ ನಿನ್ನೆ ಶಾಲೆಗೆ ಬರಲಿಲ್ಲ" ಎಂದು ನನ್ನ ಗೆಳೆಯನು ನನ್ನನ್ನ ಕೇಳಿದನು.<br>**ಯೋಜನೆ :**<br>ಎಲ್ಲಾ ಲೇಖನ ಚಿಹ್ನೆಗಳನ್ನು ಕಾರ್ಡ್‌ಗಳಲ್ಲಿ ಕತ್ತರಿಸಿ ಅಂಟಿಸಿ ಅವುಗಳ ಹೆಸರುಗಳನ್ನು ಬರೆದು ಅವುಗಳನ್ನು ಬಳಸುವ ಸಂದರ್ಭಗಳನ್ನು ಉದಾಹರಣೆ ಮೂಲಕ ತೋರಿಸಿ. | ಪರಿಶೀಲನೆ |

## ಅಭ್ಯಾಸದ ಹಾಳೆ – 1

**ಗದ್ಯ : ಡಾ. ರಾಜಕುಮಾರ್** **ಮಾಹೆ : ನವೆಂಬರ್–2021**

☞ **ಕೆಳಗಿನ ಪದಗಳ ಅರ್ಥ ಬರೆಯಿರಿ:**

ಆಡುಂಬೊಲ = ____________________

ಹೆಗಲೆಣೆ = ____________________

ಮಜಲು = ____________________

ಅಗಣಿತ = ____________________

☞ **ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ:**

1. ಡಾ. ರಾಜಕುಮಾರ್‌ರವರು ____________________ ರಂದು ಜನಿಸಿದರು.
2. ಡಾ. ರಾಜಕುಮಾರ್‌ರವರ ತಂದೆಯ ಹೆಸರು ____________________,
   ತಾಯಿಯ ಹೆಸರು ________________, ಪತ್ನಿಯಹೆಸರು ________________.
3. ಡಾ. ರಾಜಕುಮಾರ್‌ರವರಿಗೆ ತಂದೆ ತಾಯಿ ಇಟ್ಟ ಹೆಸರು ________________.
4. 'ಮುತ್ತುರಾಜ' ಎಂಬ ಹೆಸರನ್ನು ಬದಲಿಸಿ 'ರಾಜಕುಮಾರ್' ಎಂದು ನಾಮಕರಣ ಮಾಡಿದವರು
   ____________________.
5. ________________ ಸಿನೆಮಾದ 'ನಾದಮಯ' ಹಾಡಿಗೆ ರಾಷ್ಟ್ರ ಪ್ರಶಸ್ತಿ ಲಭಿಸಿತು.

☞ **ಹೊಂದಿಸಿ ಬರೆಯಿರಿ:**

| | |
|---|---|
| 1. ಬಾಲ್ಯ ಜೀವನ | 1992 |
| 2. ಕರ್ನಾಟಕ ರತ್ನ | ಪುನೀತ್ ರಾಜಕುಮಾರ್ |
| 3. ಪದ್ಮಭೂಷಣ | ಗಾಜನೂರು |
| 4. ಬೆಟ್ಟದ ಹೂ | ಯಾರೇ ಕೂಗಾಡಲಿ |
| 5. ಸಂಪತ್ತಿಗೆ ಸವಾಲ್ | 1983 |

☞ **ಕೆಳಗಿನ ಕಥೆಯನ್ನು ನಿಧಾನವಾಗಿ ಓದಿ, ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:**

### ಮಾರವಾಡಿ ಬಾವಿ ಮಾರಿದ ಕತೆ

ಜಾಣ ಮಾರವಾಡಿ ಚಾಣಾಕ್ಷ ಶೆಟ್ಟಿಯೊಬ್ಬನಿಗೆ ತನ್ನ ಬಾವಿಯನ್ನು ಮಾರಿದ. ರೆಜಿಸ್ಟ್ರೇಷನ್ ಕೆಲಸನೂ ಮುಗೀತು. ಮರುದಿನವೇ ಮಾರವಾಡಿ ಆ ಶೆಟ್ಟಿಗೆ ಹಿಂಗಂದ. "ನಾನು ನಿನಗ ಬಾವಿಯನ್ನು ಮಾತ್ರ ಮಾರಿದ್ದೇನೆ, ಅದರೊಳಗಿನ ನೀರನ್ನಲ್ಲ. ನೀರು ನನ್ನವೇ ನಿನಗೆ ನೀರು ಬೇಕಾದರೆ ದುಡ್ಡು ಕೊಡಬೇಕು". ಇದನ್ನು ಆಲಿಸಿದ ಶೆಟ್ಟಿ ನಗುತ್ತಾ "ನಾನೂ ಅದನ್ನ ಹೇಳಾಕ ಬಂದಿದ್ದೆ. ನನ್ನ ಬಾವ್ಯಾಗಿನ ನೀರನ್ನ ಆದಷ್ಟು ತಕ್ಕೊಂಡು ಬಿಡು. ಇಲ್ಲಂದ್ರ ನಿನ್ನ ನೀರನ್ನ ನನ್ನ ಬಾವ್ಯಾಗ ಇಟಗೊಳ್ಳಾಕ ಬಾಡಗಿ ಕೊಡಬೇಕಾಗುತ್ತೆ ನೋಡು" ಅಂದ. ಮಾರವಾಡಿ ಸುಸ್ತೋ ಸುಸ್ತು. ಸೇರಿಗೆ ಸವಾಸೇರು.

**ಪ್ರಶ್ನೆಗಳು:**

* ಈ ಕಥೆಯಲ್ಲಿ ಬರುವ ಗಾದೆ ಮಾತು ಯಾವುದು?

* ಮಾರವಾಡಿಯು ಬಾವಿಯನ್ನು ಯಾರಿಗೆ ಮಾರಿದನು?

* ಮಾರವಾಡಿ ಚಾಪೆ ಕೆಳಗೆ ನುಸುಳಿದರೆ: ಶೆಟ್ಟಿಯು ____________________ ಕೆಳಗೆ ನುಸುಳಿದನು.

* ಈ ಕಥೆಯಲ್ಲಿ ಬಂದಿರುವ ಗ್ರಾಮ್ಯ ಪದಗಳಿಗೆ ಗ್ರಾಂಥಿಕರೂಪ ಬರೆಯಿರಿ.

ಹಿಂಗಂದ = ಹೀಗೆ ಹೇಳಿದ

ಹೇಳಾಕ = ____________________

ನಿನಗ = ____________________

ಬಾವ್ಯಾಗಿನ = ____________________

ತಕ್ಕೊಂಡು = ____________________

ಇಲ್ಲಂದ್ರ = ____________________

ಇಟಗೊಳ್ಳಾಕ = ____________________

ಬಾಡಗಿ = ____________________

ಬಾವ್ಯಾಗ = ____________________

## ಅಭ್ಯಾಸದ ಹಾಳೆ – 1

**ಗದ್ಯ : ಮಗು ಮತ್ತು ಹಣ್ಣುಗಳು** **ಮಾಹೆ : ನವೆಂಬರ್–2021**

---

☞ **ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ:**

1. 'ಮಗು ಮತ್ತು ಹಣ್ಣುಗಳು' ಪದ್ಯವನ್ನು ಬರೆದ ಕವಿ ____________________.
2. ಮಾನವನು ಪಾಠ ಕಲಿಯಲು ____________________ ಮೊದಲ ಗುರು.
3. 'ಗಿರವಿಯಂಗಡಿ' ಪದದ ಅರ್ಥ ____________________.
4. ಹಬ್ಬಿಕೋ ____________________ ಬಳ್ಳಿಯ ಹಾಗೆ.
5. ಬೆಲೆಯ ____________________ ಯಾನ ಹೊರಡದಿರು.

☞ **ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ:**

**ಮಾದರಿ :** ಹಣ್ಣಿನಂಗಡಿ = ಹಣ್ಣಿನ + ಅಂಗಡಿ

1. ಕೆಡವದಿರಲಿ = ____________________
2. ಗಿರವಿಯಂಗಡಿ = ____________________
3. ಹಣ್ಣಾಗು = ____________________
4. ಬಾಳೆಹಣ್ಣಿಗೆ = ____________________
5. ಅಪರೂಪವಾಗು = ____________________
6. ಕಲ್ಲಂಗಡಿಯಾಗಿ = ____________________
7. ದಾಳಿಂಬೆಯೊಳಗೆ = ____________________
8. ಖನಿಯಾಗು = ____________________
9. ಹುಳಿಗಟ್ಟುವುದು = ____________________
10. ಉದ್ದಗಲ = ____________________
11. ಹೊರಡದಿರು = ____________________
12. ಮಣ್ಣಾಗುತ = ____________________
13. ಎಲಚಿಯಾಗು = ____________________

☞ **ಕೆಳಗಿನ ಲೇಖನ ಚಿಹ್ನೆಗಳ ಹೆಸರು ಬರೆಯಿರಿ:**

| | |
|---|---|
| :– | " " |
| ' ' | ( ) |